34

ಅಳುವಿನ ಹೊಳೆ

ಮತ್ತು

ಕೇಶವ ಭೂಪ

(ಮಕ್ಕಳ ಕಥೆಗಳು)

ಲೇಖಕರು:

''ನವಗಿರಿನಂದ''

1955.

ಒಂದಾಣೆ ಮಾಲೆ

ಒಂದಾಣೆ ಮಾಲೆಯಲ್ಲಿ ಈ ವರೆಗೆ ಪ್ರಕಟವಾದ ಪುಸ್ತಕಗಳು

೧. *ಕೆಪ್ಪಟಿರಾಯ (ವಿನೋದ ಕಥೆ) ಲೇ: ದಿ| ಎಮ್. ಎನ್. ಕಾಮತ್.
೨. ನಾರೀಶ್ವರರು (ಏಕಾಂಕ ಪ್ರಹಸನ)
೩. *ಕಳ್ಳನಿಗೆ ಸಂಭಾವನೆ ಮತ್ತು ಇತರ ಕಥೆಗಳು.
೪. *ಸದ್ರಿಸುಬ್ಬ (ಏಕಾಂಕ ಪ್ರಹಸನ) ಲೇ: ದಿ| ಎಮ್. ಎನ್. ಕಾಮತ್.
೫. *ಅದ್ಭುತ ತ್ಯಾಗ ಮತ್ತು ಇತರ ಕಥೆಗಳು (ವೈದ್ಯಗುರು ಎಮ್. ಆರ್. ಭಟ್.)
೬. ಚುನಾವಣೆ ಅರ್ಥಾತ್ ಬನಾವಣೆ (ಏಕಾಂಕ ಪ್ರಹಸನ)
೭. 'ಬೀಡಿ ಸೇದಬೇಡಿ' ಮತ್ತು 'ಆ ಮಗು' (ವಿನೋದ ಕಥೆಗಳು)
೮. ಇಂಗ್ಲಿಷ್-ಕನ್ನಡ ಅರ್ಥಕೋಶ (ಭಾರತ ಸಂವಿಧಾನದಿಂದ)
೯. *ಲಂಚಕ್ಕೆ ಸಂಚಕಾರ (ಡಾ| ಎಸ್. ಪಿ. ಭಟ್.)
೧೦. ಟಿಶ್ಯೂ ಔಷಧಿಗಳ ಕೈಪಿಡಿ. (ಶ್ರೀ| ಪಿ. ಎಸ್. ವೆಂಕಟಕೃಷ್ಣರಾವ್.)
೧೧. ಶ್ರೀಕ್ಷೇತ್ರ ಧರ್ಮಸ್ಥಳ (ದ್ವಿತೀಯ ಮುದ್ರಣ)
೧೨. ಜೀವದ ಮೌಲ್ಯ ಮತ್ತು ಇತರ ಕಥೆಗಳು. (ಎಲ್. ಎಸ್. ನಾಯಕ.)
೧೩. ಸತ್ತವನ ಸೇಡು ಮತ್ತು ಇತರ ಕಥೆಗಳು. (ಡಾ| ವಿ. ಆರ್. ಭಟ್.)
೧೪. "ವೆಂಕಟನ ಸಂಕಟ" (ಏಕಾಂಕ ಪ್ರಹಸನ) ಮತ್ತು ಎರಡು ಕಥೆಗಳು.
೧೫. ಬಾಬಿಗೆ ಬಾಸಿಂಗ (ಏಕಾಂಕ ಪ್ರಹಸನ).
೧೬. ವೇಣೂರಿನ ಗತವೈಭವ. (ಲೇ: ದಿ| ಪಂಡಿತ ಲೋಕನಾಥ ಶಾಸ್ತ್ರಿಗಳು.)
೧೭. ಒಗಟುಗಳು. [ಲೇ: ಶ್ರೀ ಟಿ. ಚಂದ್ರರಾಜ ಸೆಟ್ಟಿ.]
೧೮. ಜಗಳಗಂಟಿ ಮತ್ತು ಇತರ ಕಥೆಗಳು. [ಲೇ: ವೈದ್ಯಗುರು ಎಮ್. ಆರ್. ಭಟ್.]
೧೯. ರಥೋತ್ಸವ.
೨೦. ಕರಿನಾಯಿ ಮತ್ತು ಮುಪ್ಪು (ಲೇ: ದಿ| ಎಮ್. ಎನ್. ಕಾಮತ್)
೨೧. ಭಾರತದ ಮಹಾನಗರಗಳು (ಪ್ರಥಮ ಭಾಗ)
೨೨. ತಿರುಕ್ಕುರಲ್ (ಶ್ರೀ| ಡಿ. ಪುಟ್ಟಸ್ವಾಮಿ.)
೨೩. ಸೂರ್ಯನ ಸಂಸಾರ ಮತ್ತು ಇತರ ಕಥೆಗಳು. (ಲೇ: ಶ್ರೀ| ಬಿ. ಶಂಕರ ಭಟ್.)
೨೪. ಭಾರತದ ಮಹಾನಗರಗಳು (ದ್ವಿತೀಯ ಭಾಗ)
೨೫. ಧೈರ್ಯ ಮತ್ತು ಇತರ ಸತ್ಯಕಥಾನಕಗಳು. (ಶ್ರೀ ಎಲ್. ಎಸ್. ನಾಯಕ.)
೨೬. ಮಾರಾವತಾರ (ಏಕಪಾತ್ರ ಯಕ್ಷಗಾನ ಪ್ರಬಂಧ) (ಲೇ: ಶ್ರೀ| ಜಿ. ಆರ್. ಪಾಂಡೇಶ್ವರ)
೨೭. ಹಾಸವಿಲಾಸ (ಆರಿಸಿ ತೆಗೆದ ನಗೆಹನಿಗಳು)
೨೮. ಸತ್ಯವಂತ ಬಾಬಿ (ಏಕಾಂಕ ಪ್ರಹಸನ)
೨೯. ಜಾಣ್ಮೆಯ ಒಗಟುಗಳು (ಸಂಗ್ರಾಹಕರು: ಡಾ| ಎಸ್. ಪಿ. ಭಟ್, ಮಂಗಳೂರು)
೩೦. ಜಾತಕ ಕಥೆಗಳು (ಸಂಗ್ರಾಹಕರು: ಎಮ್. ಸುಬ್ರಾಯನ್, ವಿದ್ವಾನ್.)
೩೧ ಕಾರ್ಕಳದ ಚರಿತ್ರೆ (ಲೇ: ಶ್ರೀ| ಡಿ. ಪುಟ್ಟಸ್ವಾಮಿ, ಬಿ. ಎ., ಬಿ. ಎಲ್., ಎಡ್ವೊಕೇಟ್)
೩೨. ಮರ್ಜಿ (ಏಕಾಂಕ ಪ್ರಹಸನ) ರಚಯಿತರು: ದಿ| ಎಮ್. ಎನ್. ಕಾಮತ್.
೩೩. ದರ್ಶನದ ಕಥೆಗಳು (ಲೇ: ಬಿ. ಶಂಕರ ಭಟ್ಟ ಮತ್ತು ಬಿ. ಎಮ್. ಶರ್ಮಾ)
೩೪. ಅಳುವಿನ ಹೊಳೆ ಮತ್ತು ಕೇಶವಭೂಪ (ಮಕ್ಕಳ ಕಥೆಗಳು) ಲೇ: "ನವಗಿರಿನಂದ"

* ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಈ ವರೆಗೆ ಮೂವತ್ತನಾಲ್ಕು ಪುಸ್ತಕಗಳಲ್ಲಿ, ಮೂವತ್ತನಾಲ್ಕು ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ 766 ಪುಟಗಳನ್ನು ಕೊಟ್ಟಿರುತ್ತದೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-1.

ಮಕ್ಕಳ ಕಥೆಗಳು

ಅಳುವಿನ ಹೊಳೆ

ಅನೇಕ ವರ್ಷಗಳ ಹಿಂದೆ ಬಾವೂರಿನಲ್ಲಿ ಸುಂದರ ಎಂಬ ಒಬ್ಬ ಹುಡುಗ ಇದ್ದ. ಅವನ ತಂದೆತಾಯಿಗಳು ಭಾರೀ ದೊಡ್ಡ ಶ್ರೀಮಂತರು. ಸುಂದರ ಅವರಿಗೆ ಒಬ್ಬನೇ ಮಗ. ಆದುದರಿಂದ ಅವನನ್ನು ಅತ್ಯಂತ ಪ್ರೀತಿಯಿಂದ ಬೆಳೆಸುತ್ತಿದ್ದರು. ಅವನು ಕೇಳಿದ್ದನ್ನು ಕೊಡುತ್ತಿದ್ದರು; ಹೇಳಿದ್ದನ್ನು ಕೇಳುತ್ತಿದ್ದರು; ಹೂವಿನ ಹಾಗೆ ಸಂರಕ್ಷಣೆಮಾಡುತಿದ್ದರು.

ಮೊದಲೇ ಶ್ರೀಮಂತರ ಮಗ. ಪ್ರತಿಯೊಂದು ಕೆಲಸಕ್ಕೂ ಆಳು ಕಾಳುಗಳು ಇರುವ ಮನೆ. ಸುಂದರ ಮೈಬಗ್ಗಿಸಿ ಯಾವ ಕೆಲಸವನ್ನೂ ಮಾಡುತಿದ್ದಿಲ್ಲ. ಮಾಡಬೇಕಾಗಿರಲೂ ಇಲ್ಲ. ಅವನಿಗೆ ಬೇಕುಬೇಕಾದ ತಿಂಡಿತೀರ್ಥಗಳು ಕುಳಿತಲ್ಲೇ ಮಲಗಿದಲ್ಲೇ ಅವನ ಬಾಯಿಗೆ ಬರುತಿದ್ದುವು.

ಕೂತೇ ಬಳೆದು ಬಳೆದು ಅವನ ದೇಹವು ಉಬ್ಬುತ್ತಾ ಹೋಯಿತು. ದೇಹದಲ್ಲಿ ನೀರು ಜಾಸ್ತಿಯಾಯಿತು. ಮುಖ ಹೊಟ್ಟೆ ಕೈಕಾಲು ಎಲ್ಲವೂ ಗುಂಡುಗುಂಡಾದುವು; ನಯವಾಗಿ ನಸೆಯಾಗಿ ಅಲಂಕಾರದ ವಿಚಿತ್ರ ಬೊಂಬೆಯಂತಾದನು. ಬೊಂಬೆಯಂತೆಯೇ ಫಳಫಳನೆ ಹೊಳೆಯು ತ್ತಿದ್ದನು. ಮಗನ ಈ ಬಗೆಯ ತುಂಬುರೂಪನ್ನು ನೋಡಿ ತಂದೆತಾಯಿ ಗಳು "ಆಹಾ! ಎಷ್ಟು ಚೆಂದ ನಮ್ಮ ಕಂದ" ಎಂದು ಹೊಗಳುತಿದ್ದರು. ಊರಿನವರು ಅವನಿಗೆ "ಸೌತೇ ಸುಂದರ" ಎಂದು ಅಡ್ಡ ಹೆಸರಿಟ್ಟರು. ಆದರೆ ಇದಿರಿನಲ್ಲಿ ಹಾಗೆ ಕರೆಯಲು ಭಯ. ಶ್ರೀಮಂತ ಕುಮಾರ ತಾನೆ?

ಗೋಸಾಳದಾಸನೆಂಬ ವಿಶ್ವಾಸದ ಆಳು, ಸುಂದರನನ್ನು ಹೊತ್ತು ಕೊಂಡು ಪಾಠಶಾಲೆಗೆ ಒಯ್ಯುತಿದ್ದನು. ಸುಂದರನಿಗೆ ಕಾಲುಗಳನ್ನು ಆಡಿಸಲಿಕ್ಕೂ ಬಾರದು.

ಸಂಜೆಯಲ್ಲಿ ಪಾಠಶಾಲೆಯಿಂದ ಮನೆಗೆ ಬರುವಾಗ ಗೋಸಾಳದಾಸ ಸುಂದರನನ್ನು ತನ್ನ ಮನೆಗೇ ಹೊತ್ತೊಯ್ಯುತಿದ್ದ. ಅವನಿಗೆ ಚೆಂದಿ ಎಂಬ

ಮಗಳಿದ್ದಳು. ಚೆಂದಿ ನಿಜಕ್ಕೂ ಬಲು ಚೆಂದ. ಅವಳು ಈ ಸುಂದರ ಗೊಂಬೆಯಾಕಾರವನ್ನು ನೋಡಿ ಸಂತೋಷಪಡಲಿ ಎಂದು ಗೋಸಾಳದಾಸನ ಆಸೆ. ಅವಳೊಂದಿಗೆ ಆಡುತ್ತ ಈತನ ಬೊಜ್ಜು ಕರಗಿದರೂ ಕರಗೀತು ಎಂದು ಇನ್ನೊಂದು ಒಳಾಸೆ ಅವನಿಗೆ.

ಸೌತೇ ಸುಂದರ ನೋಡಲು ವಿನೋದರೂಪಿಯಾಗಿದ್ದನೇ ಹೊರತು ಆಡಲು ಉಪಯೋಗವುಳ್ಳವನಲ್ಲ. ಚೆಂದಿಗೆ ಅವನೊಡನೆ ಆಡಲು ಮನಸ್ಸೇ ಬರಲಿಲ್ಲ. ಅವನನ್ನು ಮುಟ್ಟಲಿಕ್ಕೂ ಭಯವಾಗುತಿತ್ತು ಅವಳಿಗೆ. ನಕ್ಕರೆ ಅವನ ಮುಖ ಒಡೆದೀತೋ, ಮುಟ್ಟಿದರೆ ಅವನ ಮೈಯೊಡೆದೀತೋ ಅನಿಸುತಿತ್ತು. ಆತ ಸಮೀಪಕ್ಕೆ ಸರಿದರೆ ಆಕೆ ದೂರದೂರ ಹೋಗುತಿದ್ದಳು. ಸುಂದರನಿಗೇನೋ ಚೆಂದಿಯೊಡನೆ ಆಡಬೇಕೆಂದು ಪರಮಾಸೆ. ಅವನು ಆಸೆಯಿಂದ ಮುಂದೆಮುಂದೆ ಹೋಗುವುದೂ, ಅವಳು ಅಂಜಿಕೆಯಿಂದ ಹಿಂದೆಹಿಂದೆ ಹೋಗುವುದೂ ಇದೇ ಅವರ ಆಟ. ಹೀಗೆ ಕೆಲವು ದಿನಗಳು ಕಳೆದುವು.

೦ ೦ ೦ ೦ ೦ ೦

ಒಂದು ದಿನ ಗೋಸಾಳದಾಸ ಸುಂದರನನ್ನು ತನ್ನ ಮನೆಯಲ್ಲಿ ಬಿಟ್ಟು ಇಬ್ಬರೂ ಸ್ವಲ್ಪ ಹೊತ್ತು ಆಲೆದಾಡಿಕೊಂಡಿರಲಿ ಎಂದುಕೊಂಡು ತೋಟಕ್ಕೆ ಹೋದ. ಅಲ್ಲಿ ಮನೆಯಲ್ಲಿ ಸುಂದರ ಚೆಂದಿಯರ ಹೊರತು ಬೇರೆ ಯಾರೂ ಇರಲಿಲ್ಲ. ಆಗ ಸುಂದರ ಚೆಂದಿಯ ಕೈ ಹಿಡಿದು—"ಚೆಂದಿ, ನೀನೆಷ್ಟು ಚೆಂದ. ನನ್ನನ್ನು ಮದುವೆಮಾಡಿಕೋ ಚೆಂದಿ, ನಮ್ಮ ಮನೆಗೆ ಬಾ" ಎಂದ.

"ಅಯ್ಯಯ್ಯೋ! ನಾನೊಲ್ಲೇ!" ಎಂದು ಕೂಗಿ ಚೆಂದಿ ಅವನ ಕೈ ಕೊಸರಿಕೊಂಡು ಓಡಿಹೋದಳು. ಸುಂದರನಿಗೆ ಸಣ್ಣ ಮುಖವಾಯಿತು. ದುಃಖ ಬರತೊಡಗಿತು. ಬಳಿಕ ಗೋಸಾಳದಾಸ ಬಂದು ಸುಂದರನನ್ನು ಎತ್ತಿಕೊಂಡು ಅವನ ಮನೆಗೆ ಹೊರಟ.

ರಾತ್ರಿಯಾಯಿತು; ಸುಂದರ ತನ್ನ ದುಃಖವನ್ನು ಯಾರೊಡನೆಯೂ ಹೇಳಲಿಲ್ಲ. ಹಾಸಿಗೆಯಲ್ಲಿ ಮಲಗಿದಾಗ ಅವನಿಗೆ ನಿದ್ದೆ ಬಂದರೆ ತಾನೆ?

"ಚೆಂದಿ ಒಲ್ಲೆ ಎಂದಳು ಏಕೆ?........ನಾನು ಎಲ್ಲರ ಹಾಗೆ ಇಲ್ಲವೆ? ಅಯ್ಯೋ! ಏನು ಮಾಡಲಿ? ಚೆಂದೀ! ಚೆಂದೀ!" ಎಂದು ಹಂಬಲಿಸತೊಡಗಿದ. ಅವನ ಕಣ್ಣಿನಲ್ಲಿ ನೀರು ತುಂಬಿತುಂಬಿ ಧಾರೆಧಾರೆಯಾಗಿ ಸುರಿಯ

ತೊಡಗಿತು. ಸುರಿದಷ್ಟೂ ಇನ್ನೂ ಸುರಿಯುತಿತ್ತು. ಕಣ್ಣೀರಿನಿಂದ ಆ ಮನೆಯೆಲ್ಲಾ ತುಂಬಿತು; ಅಂಗಳವೆಲ್ಲಾ ತುಂಬಿತು. ಮಂದಿಯೆಲ್ಲಾ ಎಚ್ಚೆತ್ತು ಗಾಬರಿಯಿಂದ ಆಚೀಚೆ ಓಡಾಡಿದರು. ಸುಂದರನ ತಾಯಿತಂದೆಯರು ಎಚ್ಚೆತ್ತು, ಸುತ್ತಲೂ ತುಂಬಿದ ನೀರನ್ನು ನೋಡಿ ಹೆದರಿ "ಕಂದಾ! ಸುಂದರಾ!" ಎಂದು ಕೂಗುತ್ತಾ ನೀರಿನಲ್ಲಿ ತೇಲಾಡುತ್ತ ಹುಡುಕಾಡಿದರು. ನೀರು ಕ್ಷಣೇ ಕ್ಷಣೇ ಏರಿಕೊಂಡೇ ಬರುತಿತ್ತು.

ಆ ನೀರು ಅಲ್ಲೆಲ್ಲಾ ತುಂಬಿದ್ದು ಮಾತ್ರವೇ ಅಲ್ಲ, ಬೀದಿಯಲ್ಲಿಯೂ ಊರಿನಲ್ಲಿಯೂ ಕೇರಿಯಲ್ಲಿಯೂ ತುಂಬಿಕೊಂಡು ಹೋಯಿತು. ಮಳೆಯಿಲ್ಲದೆ ತನ್ನಿಂತಾನೇ ಇಷ್ಟೊಂದು ನೀರು ಉಕ್ಕಿದ್ದು ನೋಡಿ, ಊರವರೆಲ್ಲಾ ಹೆದರಿದರು. ಅದೂ ಮಧ್ಯರಾತ್ರಿಯಲ್ಲಿ, ಎಲ್ಲರೂ ನಿದ್ರೆಯಲ್ಲಿರುವಾಗ ಉಕ್ಕಿದರೆ ಕೇಳಬೇಕೆ? "ಅಯ್ಯೋ! ಇದು ಊರು ಮುಳುಗಿಸಲಿಕ್ಕೆ ಬರುವ ಪ್ರಳಯ. ಪ್ರಪಂಚದ ಗತಿ ಮುಗಿಯಿತು. ಸಮುದ್ರ ಉಕ್ಕಿತು. ಅಂದ ಹಾಗೆ ಈ ನೀರೆಲ್ಲಾ ಉಪ್ಪಾಗಿದೆ. ಸಮುದ್ರವೇ ಸರಿ!" ಎಂದು ಜನರೆಲ್ಲಾ ಪ್ರಲಾಪಿಸುತ್ತಿದ್ದರು. ನೀರಿನಲ್ಲಿ ತೇಲಾಡುತ್ತಾ ಕೊಚ್ಚಿಕೊಂಡು ಹೋಗುತ್ತಿದ್ದರು. ದನಕರು, ಆಡು, ನಾಯಿ, ಬೆಕ್ಕುಗಳೂ ಕೊಚ್ಚಿಹೋಗ ತೊಡಗಿದುವು.

ಹೀಗೆ ದೇಹದ ನೀರೆಲ್ಲಾ ಕಣ್ಣೀರಾಗಿ ಸುರಿದುಹೋಗುತಿದ್ದಾಗ ಸುಂದರನ ದೇಹ ಹಗುರಾಗುತ್ತಾ ಬಂದಿತು. ಹಗುರಾದಂತೆ ಚುರುಕಾಗುತ್ತಾ ಬಂದ. ಉತ್ಸಾಹ ತೋರತೊಡಗಿತು. ಏಳುವ, ಹಾರುವ, ಧುಮುಕುವ ಎಂದೆಲ್ಲಾ ತೋರಿತು. ಫಕ್ಕನೆ ಭಯಬಂತು. ಈ ಮಹಾ ನೀರಿನಲ್ಲಿ ಚೆಂದಿಯೂ ಮುಳುಗಿಹೋಗುವಳೆ? ಹೋಗಿಯೇ ಬಿಟ್ಟಳೆ?........

ಈ ನೆನಪು ಬಂದಕೂಡಲೇ ಅವನಿಗೆ ಸುಮ್ಮನಿರಲಾಗಲಿಲ್ಲ. ಕೂಡಲೇ ಅವನು ಆ ಅಳುವಿನ ಹೊಳೆಯಲ್ಲಿ ಈಜಾಡುತ್ತಾ ಚೆಂದೀ, ಚೆಂದೀ, ಎಂದು ಕೂಗುತ್ತಾ ಅವಳ ಮನೆಯ ಬಳಿಗೇ ಸಾಗಿದ.

ಮಧ್ಯರಾತ್ರಿಯಲ್ಲಿ ನೀರುಬಂದುದರಿಂದ ಚೆಂದಿಯೊಂದು ಕಡೆ, ಅವಳ ತಂದೆ ಗೋಸಾಳದಾಸನೊಂದುಕಡೆ ಆಗಿಬಿಟ್ಟಿದ್ದರು. ಚೆಂದಿಯ ಮನೆ ಮುಳುಗಿತ್ತು. ಚೆಂದಿ ಮಾಡಿನ ತುದಿಯಲ್ಲಿ ನಡುಗುತ್ತ ಕುಳಿತಿದ್ದಳು. ಗೋಸಾಳದಾಸ ಎಲ್ಲಿಗೋ ಕೊಚ್ಚಿಕೊಂಡು ಹೋಗಿದ್ದ.

ಆಗ ಆಕಾಶದಲ್ಲಿ ಚಂದ್ರ ತೇಲುತಿದ್ದ. ಆ ಪ್ರಕಾಶದಲ್ಲಿ ಸುಂದರ ಚೆಂದಿಯನ್ನು ಕಂಡ. "ಚೆಂದೀ" ಎಂದು ಗಟ್ಟಿಯಾಗಿ ಕೂಗಿದ. ಹೆದರಿಕೆ ಯಿಂದ ಸಾವಿನ ಬಳಿಯಲ್ಲಿದ್ದ ಚೆಂದಿ, ಯಾರೋ ತನ್ನನ್ನು ರಕ್ಷಿಸಲು ಬಂದ ರೆಂದು ಭಾವಿಸಿದಳು. ಅದೇ ಸಮಯದಲ್ಲಿ ಮಾಡೂ ಕೊಚ್ಚಿಹೋಯಿತು. ಚೆಂದಿ "ಅಯ್ಯೋ!" ಎಂದು ಕಿರಿಚಿ ಸುಂದರನ ಹೆಗಲಮೇಲೆ ಹಾರಿದಳು. ಸುಂದರ ಅವಳನ್ನು ಹೊತ್ತುಕೊಂಡು ಬೇಗಬೇಗನೆ ಈಜುತ್ತಾ ಸಾಗಿದ.

ಚೆಂದಿ ಸಿಕ್ಕಿದ ಕೂಡಲೇ ಸುಂದರನ ಅಳು ನಿಂತುಹೋಯಿತು. ಕಣ್ಣೀರು ನಿಂತಿತು. ಅಳುವಿನ ಹೊಳೆ ಇಳಿಯತೊಡಗಿತು.

ಅಷ್ಟರಲ್ಲಿಯೇ ಆ ಹೊಳೆ ಊರನ್ನೆಲ್ಲ ಮುಳುಗಿಸಿ ಊರಹೊರಗಿನ ಗುಡ್ಡದ ವರೆಗೂ ಹರಡಿತ್ತು. ಸುಂದರ ಅಲ್ಲಿಯವರೆಗೂ ಚೆಂದಿಯನ್ನು ಹೊತ್ತುಕೊಂಡೇ ಈಜಿದ.

ಆ ಮೇಲೆ ದಡಸೇರಿ, ಚೆಂದಿಯನ್ನು ಕರೆದುಕೊಂಡು ಗುಡ್ಡದ ಮೇಲೆ ಏರಿದ. ಆಕಾಶದಲ್ಲಿ ಚಂದ್ರ ಅವರಿಬ್ಬರನ್ನೂ ಕಂಡು ತನ್ನ ಕಿರಣಗಳನ್ನು ತುಂಬಾ ಅವರ ಮೇಲೆ ಸುರಿದ. ಅವರಿಬ್ಬರೂ ಒಬ್ಬರನ್ನೊಬ್ಬರು ನೋಡುತ್ತಿದ್ದರು. ತನ್ನನ್ನು ಕಾಪಾಡಿದ ಈ ಹೊಸಬನು ಯಾರಪ್ಪಾ ಎಂದು ಆಕೆ ನೋಡುತಿದ್ದಳು. ತುಂಬ ಹೆದರಿಯೂ ಇದ್ದಾಳೆ ಪಾಪ.

"ಇನ್ನೇನೂ ಹೆದರಿಕೆಯಿಲ್ಲ ಚೆಂದೀ" ಎಂದ ಸುಂದರ.

"ಈ ನೀರು, ಉಪ್ಪುಪ್ಪಾದ ನೀರು, ಹೇಗೆ ಬಂತು? ಭೂಮಿ ಒಡೆಯಿತೆ? ಸಮುದ್ರ ಉಕ್ಕಿತೆ?" ಎಂದು ಚೆಂದಿ ಕೇಳಿದಳು.

"ಅದೆಲ್ಲಾ ಇಲ್ಲ. ಇದು ಅಳುವಿನ ಹೊಳೆ. ನನಗೆ ಆನಂದವಾದರೆ ಈ ಹೊಳೆ ಬತ್ತುತ್ತದೆ" ಎಂದ ಸುಂದರ. ಚೆಂದಿ ಪಿಳಪಿಳ ನೋಡಿದಳು.

"ಈಗ ಹೇಳು ಚೆಂದಿ, ನಾನು ಚೆಂದಾಗಿದ್ದೇನೆಯೊ?" ಸುಂದರ ಕೇಳಿದ.

"ಇದ್ದೀರಲ್ಲಾ" ಎಂದಳು ಚೆಂದಿ.

ಅಳುವಿನಿಂದ ಮೈಯೊಳಗಿದ್ದ ನೀರೆಲ್ಲಾ ಇಳಿದುಹೋಗಿ ಸುಂದರ ನಿಜಕ್ಕೂ ಸುಂದರನಾಗಿದ್ದ.

"ಹಾಗಾದರೆ ನನ್ನನ್ನು ಮದುವೆಮಾಡಿಕೊಳ್ಳುವಿಯಾ?" ಎಂದು ಸುಂದರ ಕೇಳಿದ.

"ಹುಂ," ಎಂದಳು. ಬಾಯಿಬಿಟ್ಟು ಹೇಳಲು ನಾಚಿಕೆಯಾಯಿತು. "ನನ್ನ ಅಪ್ಪ ಅಮ್ಮ ಎಲ್ಲಿಯೋ? ಮುಳುಗಿಹೋದರೊ?" ಎಂದಳು ಮತ್ತೆ.

"ಅವರಿಗೆ ಈಜಲಿಕ್ಕೆ ಬರುತ್ತೆ. ಎಲ್ಲಿಯೋ ಇದ್ದಾರೆ. ಹೆದರಬೇಡ. ಈ ನೀರು ಕಡಮೆಯಾಗುತ್ತದೆ. ನೀನು ನನ್ನನ್ನು ಮದುವೆಮಾಡಿಕೊಳ್ಳು ವುದಿಲ್ಲ ಅಂದರೆ ಮತ್ತೆ ನೀರು ಉಕ್ಕೀತು" ಎಂದ.

"ಹುಂ ಅಂದೆನಲ್ಲಾ. ನೀವು ನನ್ನನ್ನು ಕಾಪಾಡಿದಿರಿ. ಇನ್ನು ನಾನು ನಿಮ್ಮವಳು" ಎಂದಳು ಚಂದಿ.

"ನಾನು ಯಾರು ಗೊತ್ತೆ?" ಕೇಳಿದ ಸುಂದರ.

"ಇಲ್ಲ."

"ನಾನೇ ಆ ಸೌತೇ ಸುಂದರ. ಇನ್ನು ಕೇವಲ ಸುಂದರ. ಇನ್ನು ನಾನು ಚುರುಕಾದೆ; ಚಟುವಟಿಕೆಯಿಂದ ಎಲ್ಲರ ಹಾಗೆ ಕೆಲಸ ಮಾಡು ತ್ತೇನೆ. ಕೂತು ತಿಂದು ಉಬ್ಬುವುದಿಲ್ಲ!" ಎಂದು ಚೆಂದಿಯ ಕೈಹಿಡಿದ.

ಬೆಳಗಾಯಿತು. ರಾತ್ರಿಯ ನೀರೆಲ್ಲಾ ಬತ್ತಿ ಊರೆಲ್ಲಾ ಸೊಗಸಾಗಿ ತಲೆ ಎತ್ತಿತ್ತು. ಚೆಂದೀ—ಸುಂದರರು ಕೈ ಕೈ ಹಿಡಿದುಕೊಂಡು ಮನೆಗೆ ಬಂದರು. ಅವರನ್ನು ನೋಡಿ ಎಲ್ಲರಿಗೂ ಸಂತೋಷವಾಯಿತು. ಮಗನ ಇಷ್ಟದಂತೆಯೇ ಸುಂದರನ ತಂದೆತಾಯಿಗಳು ಅವನಿಗೆ ಚೆಂದಿಯೊಡನೆ ಲಗ್ನ ಮಾಡಿಸಿದರು. ಒಂದು ದಿನ ರಾತ್ರಿಯ ನೀರಿನಿಂದ ಸುಂದರನ ರೂಪ ಸುಂದರವಾಯಿತೆಂದು ಎಲ್ಲರೂ ಮಾತಾಡಿಕೊಂಡರು. ಆ ನೀರು ಮಾತ್ರ ಹೇಗೆ ಬಂತೆಂದು ಯಾರಿಗೂ ಗೊತ್ತಾಗಲಿಲ್ಲ. ಒಬ್ಬೊಬ್ಬರು ಒಂದೊಂದು ವಿಧವಾಗಿ ಹೇಳುತ್ತಿದ್ದರು.

o o o o o

"ಕಾ, ಕಾ" ಶಬ್ದ ಕೇಳಿ ಎಚ್ಚೆತ್ತ ಸುಂದರ. ಬೆಳಗಾಗಿತ್ತು. ಎಲ್ಲಾ ಬರಿಯ ಕನಸು. ಎಂಥ ವಿಚಿತ್ರ ಕನಸು! ತಾಯಿ ಅವನ ಮೈಯನ್ನು ಮುಟ್ಟಿ ನೋಡಿ ಜ್ವರ ಬರುತ್ತಿದೆ ಎಂದಳು. ಹದಿನೈದು ದಿನ ಜ್ವರದಲ್ಲಿ ಮಲಗಿ ನಿಜಕ್ಕೂ ಸುಂದರ ಬಡವಾದ. ಅನಂತರ ಹೊಸ ಮನುಷ್ಯನಾಗಿ ಎದ್ದ. ಎಲ್ಲರಂತೆ ಉದ್ಯೋಗಶೀಲನಾಗಿ ಸತ್ಯಕ್ಕೂ ಸುಂದರನೇ ಆದ.

ಈಗ ಚೆಂದಿ ಅವನೊಡನೆ ಸರಾಗವಾಗಿ ಆಡುತಿದ್ದಳು. ಅವನ ಇಷ್ಟ ದಂತೆ ಅವಳೊಂದಿಗೆ ಅವನ ಮದುವೆ ಕೂಡ ಆಯಿತು. ಸುಖವಾಗಿದ್ದ.

▪▪▪▪▪▪▪▪▪

ಕೇಶವ ಭೂಪ

ಒಂದು ಊರು; ಆ ಊರಿಗೆ 'ಅಪೂರು' ಎಂದು ಹೆಸರು. ಅಲ್ಲಿ ಒಬ್ಬ ಉಂಡಾಡಿ ಇದ್ದ. 'ಕೇಶವಭೂಪ' ಎಂದು ಅವನ ಹೆಸರು. 'ಭೂಪ' ಎಂದರೆ ಅರಸ ಎಂದು ಅರ್ಥತಾನೆ? ಆದರೆ ಕೇಶವಭೂಪ ಅರಸನಾಗಿರಲಿಲ್ಲ. ಅವನ ಮುತ್ತಜ್ಜ ತಾನೊಬ್ಬ ಅರಸನಾಗಬೇಕು ಎಂದು ಚಿಂತಿಸಿದನಂತೆ. ಅರಸನ ಹಾಗೇ ವೇಷಹಾಕಿಕೊಂಡನಂತೆ. ಕೈಯಲ್ಲಿ ಒಂದು ಬಡ್ಡುಗತ್ತಿಯನ್ನು ಹಿಡಿದುಕೊಂಡನಂತೆ; ಬಳಿಕ ಮೊದ್ದು ಕುದುರೆಯ ಮೇಲೆ ಹತ್ತಿಕೊಂಡು, ಸುಮ್ಮಸುಮ್ಮನೆ ಊರ ಹೊರಗೆ ಓಡಿದನಂತೆ. ಆಗ ಅವನನ್ನು ನೋಡಿದ ಜನರೆಲ್ಲಾ 'ಭೂಪ, ಭೂಪ' ಎಂದು ಕೂಗಿದರಂತೆ. ಅಂದಿನಿಂದ ಅವನಿಗೆ 'ಭೂಪ' ಎಂಬ ಹೆಸರು ಬಿತ್ತು. ಅದೇ ಮನೆತನದ ಹೆಸರೂ ಆಯಿತು. ಹಾಗೆ ಕೇಶವ ಹೆಸರಿಗೆ ಮಾತ್ರ 'ಭೂಪ' ಅಷ್ಟೆ.

ಕೇಶವ ಭೂಪ ಹಣವಂತನೂ ಅಲ್ಲ, ಬಡವನೂ ಅಲ್ಲ. ಕಸಬು ಕೈಗಾರಿಕೆಗಳೂ ಅವನಿಗೆ ಗೊತ್ತಿಲ್ಲ. ತಂದೆ, ತಾಯಿ, ಬಂಧು ಮೊದಲಾದ ಎಲ್ಲರನ್ನೂ ಆತ ಕಳಕೊಂಡಿದ್ದ. ಹಿಂದೆ ಅವನ ಮನೆಯವರನ್ನು ಅಂಟು ಜಾಡ್ಯವೊಂದು ನುಂಗಿತ್ತು. ಎಲ್ಲರನ್ನೂ ನುಂಗಿ, ಕೇಶವನನ್ನು ಮಾತ್ರ ನುಂಗಲಾಗದೆ ಉಳಿಸಿಬಿಟ್ಟಿತ್ತು. ಅಪ್ಪ ಕೂಡಿಟ್ಟ ಸ್ವಲ್ಪ ಹಣವೂ ಸಣ್ಣದೊಂದು ಮನೆಯೂ ಕೇಶವ ಭೂಪನಿಗಿತ್ತು. ಅಷ್ಟೇ ಸಾಕೆನಿಸಿತ್ತು ಅವನಿಗೆ. ಸಣ್ಣ ಸಣ್ಣ ಕೆಲಸಮಾಡಿ ಹಣ ಸಂಪಾದಿಸಲು ಅವನಿಗೆ ಇಷ್ಟವಿಲ್ಲ. ಮಾಡಿದರೆ ಯಾರಿಂದಲೂ ಸಾಗದ ಕೆಲಸಮಾಡಬೇಕು. ಆಗ ತಾನೇ ಕೀರ್ತಿ, ಭೂಪ ಎಂಬ ಬಿರುದು ಸಾರ್ಥಕ?

ಒಮ್ಮೆ ಕೇಶವ ಭೂಪನು ಊರ ನಡುವಿನ ಉದ್ಯಾನದಲ್ಲಿ ಕುಳಿತಿದ್ದನು. ಸಂಜೆಯ ವೇಳೆ; ಸೊಗಸಾಗಿ ಗಾಳಿ ಸೇವನೆಮಾಡುತಿದ್ದನು. ಅವನಿಗೆ ಮರೆಯಾಗಿ ಹೂವಿನ ಗಿಡಗಳು ಬೆಳೆದಿದ್ದುವು. ಅದರಾಚೆಗೆ ಯಾರೋ ತಂದೆ–ಮಗಳು ಕುಳಿತು ಮಾತಾಡುತಿದ್ದರು. ಯಾರು ಗೊತ್ತೆ? ಜಮಿಳಾಪುರದ ಅರಸು ಜಗದೀಶನೂ ಕುಮಾರಿ ಲೀಲಾವತಿಯೂ ಅಲ್ಲಿ ಕುಳಿತಿದ್ದರು. ಕುದುರೆಯೂ, ಅವರ ಪರಿವಾರದವರೂ ದೂರ ನಿಂತಿದ್ದರು.

ಲೀಲಾಕುಮಾರಿ ತಂದೆಗೆ ಒಂದು ಚಿತ್ರವನ್ನು ತೋರಿಸುತ್ತ ಹೇಳುತ್ತಿದ್ದಳು: "ಅಪ್ಪಾ, ಈ ನಳಚಕ್ರವರ್ತಿಯ ಮುಖ ನೋಡು. ಎಷ್ಟು

ಗಂಭೀರವಾಗಿದೆ! ರಾಜಕಳೆ ಸುರಿಯುತ್ತಿದೆ. ಮುಖದಲ್ಲಿರುವ ಮೀಸೆಯಿಂದಲೇ ಇಂಥ ಕಳೆ ಬಂದಿದೆ ಅಪ್ಪಾ" ಎಂದಳು.

"ಹೌದು ಲೀಲಾವತಿ. ಮೊದಲಿನ ಕಾಲದ ಅರಸರ ಮೀಸೆಗಳಲ್ಲಿ ನಿಂಬೆಹಣ್ಣುಗಳು ನಿಲ್ಲುತಿದ್ದುವು." ಎಂದು ತಂದೆ ಹೇಳಿದ.

ಅದಕ್ಕೆ ಲೀಲಾವತಿ—"ಈಗ ಇಂಥ ಮೀಸೆಯವರು ಇಲ್ಲವೆ?" ಎಂದು ಕೇಳಿದಳು.

ಅರಸನೆಂದ: "ಈಗ ಕಾಲ ಬದಲಾಗಿದೆ. ಮೀಸೆಗಳ ಗಾತ್ರ ಸಣ್ಣದಾಗುತ್ತ ಬಂದಿದೆ. ಈಗ ನನಗಿರುವ ಮೀಸೆಯಷ್ಟು ಬಲವಾದ ಮೀಸೆಯವರು ಕೂಡ ಯಾರೂ ಇಲ್ಲ."

"ಹುಡುಕಿಸಬೇಕಪ್ಪ." ಎಂದಳು ಲೀಲಾ.

"ಆಗಲಿ. ನಿನಗೆ ಅರಸುಮೀಸೆಯ ವರನನ್ನೇ ಹುಡುಕುವೆನು. ಸರಿಯೆ?" ಅರಸು ಕೇಳಿದ.

"ಅಷ್ಟುಮಾತ್ರ ಸಾಲದಪ್ಪ. ನಿಂಬೇಹಣ್ಣು ಹೊರುವ ಮೀಸೆಯವರನ್ನೇ ನೋಡಿ" ಎಂದಳು ಲೀಲಾಕುಮಾರಿ.

ಈ ಸಂಭಾಷಣೆಗಳನ್ನು ಕೇಶವ ಭೂಪ ಚೆನ್ನಾಗಿ ಕೇಳಿಕೊಂಡ. ತನ್ನ ತುಟಿಗಳ ಮೇಲೆ ಮುಟ್ಟಿ ಮುಟ್ಟಿ ನೋಡಿಕೊಂಡ. ಅಲ್ಲಿಯೇನೂ ಮೀಸೆ ಇರಲಿಲ್ಲ. ಆತ ಮೀಸೆಯನ್ನು ಬೋಳಿಸಿಕೊಳ್ಳುತಿದ್ದ. ತನಗೆ ಭೂಪ ಎಂಬ ಬಿರುದು ಸಾರ್ಥಕವಾಗಬೇಕಾದರೆ ಅರಸುಮೀಸೆ ಬೇಕು ಎಂಬ ಜ್ಞಾನ ಈಗ ಅವನಿಗೆ ಬಂತು. 'ಮೊದಲು ಮೀಸೆಯನ್ನು ಬೆಳೆಸುವ; ಅನಂತರ ಅದೃಷ್ಟವಿದ್ದರೆ ತಾನು ರಾಜಕುಮಾರಿಯ ಗಂಡ ಏಕಾಗಬಾರದು?' ಎಂದು ಯೋಚಿಸಿಕೊಂಡ.

ಆ ಮೇಲೆ ಒಂದು ವರ್ಷ ಕಳೆಯಿತು. ಕೇಶವ ಭೂಪನ ಮೀಸೆ ಸಾಕಷ್ಟು ಬೆಳೆಯಿತು. ಅವನ ಮುಖದ ಬಣ್ಣವೇ ಬದಲಾವಣೆಯಾಯಿತು. ಮೂಗಿನ ಬುಡದಲ್ಲಿ ಹೊದರಿನ ಹಾಗೆ ಬೆಳೆದ ಮೀಸೆಯ ರಾಶಿಗೆ ಶುಶ್ರೂಷೆ ಮಾಡುವುದೇ ಅವನ ಮುಖ್ಯಕೆಲಸವಾಯಿತು. ಅದಕ್ಕೆ ತುಪ್ಪ ಬೆಣ್ಣೆಗಳನ್ನು ಹಚ್ಚಿ ತೀಡುತ್ತಾ, ನೀವುತ್ತಾ, ಹೊಸೆಯುತ್ತಾ, ಸುರುಳಿಸುತ್ತಾ, ಹೀಗೆ ಯಾವಾಗಲೂ ಮೀಸೆಯ ಆರಯ್ಕೆಯಲ್ಲೇ ಇದ್ದನು. ಅವನ ಮೀಸೆ ಒಳ್ಳೇ ಪುಷ್ಟಿಯಾಗಿ ಸುಳಿ ಸುಳಿಯಾಗಿ ಫಳಫಳನೆ ಹೊಳೆಯಿತು. ಊರಲ್ಲಿ

ನಡೆಯುವ ದಶಾವತಾರ ಬೈಲಾಟಗಳನ್ನು ಆತ ತಪ್ಪದೆ ಹೋಗಿ ನೋಡುತ್ತಿದ್ದ. ಅಲ್ಲಿಯ ರಾಜಾ ರಾವಣರ ಮೀಸೆಗಳ ಮಾದರಿಗಳನ್ನೆ ತನ್ನ ಮೀಸೆಗೆ ಅಳವಡಿಸಿಕೊಳ್ಳುತ್ತಿದ್ದ. ಸದಾ ಅವನ ಮೀಸೆಯ ಹೊದರಿನಿಂದ ಹೊರಡುವ ಸುವಾಸನೆಗೆ ಮೂಗು ಅರಳಿಕೊಂಡೇ ಇತ್ತು. ಸರ್ಪದ ಹಾಗೆ ನಾಲಗೆ ಹೊರಗೆ ಬಂದು ಬಂದು ಮೀಸೆಯನ್ನು ನೆಕ್ಕುತ್ತಲೇ ಇತ್ತು. ಮೀಸೆಯನ್ನು ಉದ್ದಕ್ಕೆ ಬೆಳೆಸಿ ಕೆಪ್ಪಡೆಗಳ ಮೇಲೆ ಸುಳಿಯಾಗಿ ನಿಲ್ಲಿಸಲಾರಂಭಿಸಿದ. ಬರಬರುತ್ತಾ ಆ ಮೀಸೆಯ ಮೇಲೆ ಸಣ್ಣ ಸಣ್ಣ ಕಲ್ಲುಹರಳುಗಳನ್ನು ಇಟ್ಟುಕೊಳ್ಳಲಿಕ್ಕೂ ಪ್ರಾರಂಭಮಾಡಿದ. ಕಡೆಗೆ ಸಣ್ಣ ನಿಂಬೆಯ ಹಣ್ಣುಗಳನ್ನೇ ನಿಲ್ಲಿಸಿಕೊಂಡ. ಹೆಚ್ಚೇನು, ನಿಂಬೆಯ ಹಣ್ಣುಗಳನ್ನು ಹೊರುವ ಬಲವಾದ ಅರಸುಮೀಸೆಯೇ ಅವನಿಗೆ ಕೈಗೂಡಿಬಿಟ್ಟಿತು. ಇನ್ನು ಅದೃಷ್ಟವೊಂದೇ ಬಾಕಿ.

ಅವನಾಗಿ ರಾಜನ ಬಳಿಗೆಹೋಗುವುದು ಮರ್ಯಾದೆ ಅಲ್ಲ ತಾನೆ? ರಾಜನೇ ಅವನನ್ನು ಕರೆಯುವಂತೆ ಮಾಡಬೇಕು. ಅವನು ಆವೂರಿನಿಂದ ಜಮಾಳಾಪುರದ ನಗರಕ್ಕೆ ಹೋದ. ಅಲ್ಲೇ ಛತ್ರದ ಕೋಣೆಯೊಂದರಲ್ಲಿ ತಳವೂರಿಕೊಂಡ. ಪ್ರತಿನಿತ್ಯವೂ ಅಂದವಾದ ತೊಡುಗೆಗಳನ್ನು ತೊಟ್ಟುಕೊಂಡು ಮೀಸೆಯನ್ನು ಅಬ್ಬರವಾಗಿ ಹೊಳೆಯಿಸಿಕೊಂಡು ಅರಮನೆಯ ಬಳಿಯ ಬೀದಿಯಲ್ಲಿ ತಿರುಗಾಟಕ್ಕೆ ಪ್ರಾರಂಭಮಾಡಿದ. ಆಗ ಸ್ವಾಭಾವಿಕವಾಗಿಯೇ ಎಂಬಂತೆ ಮೀಸೆಯ ಮೇಲೆ ನಿಂಬೆ ಹಣ್ಣುಗಳನ್ನು ಇಟ್ಟುಕೊಳ್ಳುತ್ತ ನಡೆದಾಡಿದ. ಒಂದೆರಡು ಬಾರಿ ಅರಮನೆಯ ಮೇಲಿನಿಂದ ಲೀಲಾಕುಮಾರಿಯೇ ಅದನ್ನು ನೋಡಿದಳು.

ಅವಳು ತಂದೆಯೊಡನೆ ಹೇಳಿ, ಕೇಶವ ಭೂಪನನ್ನು ಅರಮನೆಗೆ ಕರೆಯಿಸಿಕೊಂಡಳು. ಅರಸನು ಆತನ ಕುಲಗೋತ್ರಗಳನ್ನು ವಿಚಾರಿಸಿ ಆತನ ಮೀಸೆಯನ್ನು ತುಂಬಾ ಹೊಗಳಿ ಮಾತಾಡಿದನು. ತಾನು ಮಹಾಭೂಪ ಮನೆತನದವನೆಂದೂ, ತನ್ನ ತಂದೆ ತಾತಂದಿರು ಅಂಥವರು ಇಂಥವರು ಎಂದೂ, ಈಗ ತಾನು ಏಕಾಂಗಿಯಾಗಿದ್ದರೂ ತನ್ನ ಮನೆತನದ ಗೌರವ ಬಿಡಲಿಲ್ಲವೆಂದೂ ಹೇಳಿದನು ಕೇಶವಭೂಪ. ರಾಜನು ಬಹಳ ಸಂತುಷ್ಟನಾದನು. ಬಳಿಕ ಅರಸನು ಲೀಲಾಕುಮಾರಿಯ ಮನೋಗತವನ್ನು ಅರಿತುಕೊಂಡು ಮದುವೆಯ ಪ್ರಸ್ತಾಪವೆತ್ತಿದನು.

ಕೇಶವಭೂಪನು ಒಮ್ಮೆಗೇ ಒಪ್ಪಲಿಲ್ಲ. ಒಪ್ಪಿದರೆ ಮರ್ಯಾದೆಗೆ, ದೊಡ್ಡಸ್ತನಕ್ಕೆ ಕಡಮೆತಾನೆ? ಪ್ರಕೃತ ತನಗೆ ಮದುವೆಯ ಯೋಚನೆಯಿಲ್ಲ ವೆಂದು ಹೇಳಿದನು. ಅರಸನು ತುಂಬಾ ಒತ್ತಾಯಮಾಡಿ ಕೇಳಿಕೊಂಡ ಮೇಲೆಯೇ ಒಪ್ಪಿಕೊಂಡನು.

ಶುಭಮುಹೂರ್ತದಲ್ಲಿ ಲೀಲಾಕುಮಾರಿಯೊಂದಿಗೆ ಕೇಶವಭೂಪನ ಮದುವೆಯಾಯಿತು. ಅರಸನ ಮನೆಯ ಮದುವೆ ಬಹಳ ಗದ್ದಲದಿಂದ ನೆರವೇರಿತು. ಅರಸನು ಮಗಳಿಗೂ ಅಳಿಯನಿಗೂ ಒಂದು ಪ್ರತ್ಯೇಕ ವಾದ ಮನೆಯನ್ನು ವಾಸಕ್ಕೆ ಏರ್ಪಡಿಸಿಕೊಟ್ಟನು. ಮೂಸೆಯ ಮಹಿಮೆ ಯಿಂದ ಕೇಶವಭೂಪನು ನಿಜಕ್ಕೂ ಭೂಪನಾದ.

○ ○ ○ ○ ○

ಒಂದು ದಿನ ಕೇಶವಭೂಪನಿಗೆ ತನ್ನ ಗ್ರಾಮದ ಜ್ಞಾಪಕ ಬಂತು. ತಾನು ಅರಸನ ಅಳಿಯನಾದ ಚೆಂದವನ್ನು ತನ್ನ ಊರಿನ ಜನರಿಗೆಲ್ಲಾ ತೋರಿಸಿ ಹೊಗಳಿಸಿಕೊಳ್ಳಬೇಕೆಂಬ ಆಸೆಯಾಯಿತು. ಹೆಂಡತಿಯೊಡನೆ ಹೇಳಿದಾಗ ಲೀಲಾಕುಮಾರಿ ತಾನೂ ಬರುವೆನೆಂದು ಕೇಳಿಕೊಂಡಳು. "ಬೇಡ. ಅದೊಂದು ಕುಗ್ರಾಮ. ಇರಲಿಕ್ಕೆ ತಕ್ಕ ಮನೆ ಕೂಡ ಅಲ್ಲಿಲ್ಲ. ನಾನು ಮೂರು ದಿನದಲ್ಲಿ ಹಿಂದಿರುಗಿ ಬರುತ್ತೇನೆ" ಎಂದು ಹೇಳಿ ಅವನೊ ಬ್ಬನೇ ಕುದುರೆ ಸವಾರಿ ಮಾಡಿಕೊಂಡು ತನ್ನ ಗ್ರಾಮಕ್ಕೆ ಹೊರಟನು.

ಅಲ್ಲಿ ತನ್ನ ಗೆಳೆಯರನ್ನು ಕಂಡದ್ದಾಯಿತು; ಮಾತಾಡಿದ್ದಾಯಿತು. ತನ್ನ ಭಾಗ್ಯಶ್ರೀಯನ್ನು ತೋರಿಸಿ ಬೆರಗಾಗಿಸಿದ್ದಾಯಿತು. ಹೊಗಳಿಸಿಕೊಂಡ ದ್ದಾಯಿತು. ಹಾಗೇ ಆ ದಿನ ಕತ್ತಲೆಯಾಯಿತು. ಒಬ್ಬ ಗೆಳೆಯನ ಮನೆ ಯಲ್ಲೇ ಅವನ ಊಟವೂ ಆಯಿತು. ಅನಂತರ ಒಬ್ಬನೇ ತನ್ನ ಹಳೆಯ ಮನೆಗೆ ತೆರಳಿದನು ಮಲಗಲಿಕ್ಕೆ.

ಅದು ಅಷ್ಟುದಿನ ಒಕ್ಕಲಿಲ್ಲದ ಮನೆಯಾದುದರಿಂದ ಮನೆತುಂಬಾ ಇಲಿ-ಹೆಗ್ಗಣಗಳು ಸೇರಿಕೊಂಡಿದ್ದುವು. ಒಂದು ಕೋಣೆಯ ಕಸವನ್ನು ಚಾಡಿಸಿ ತನ್ನ ಮಂಚದ ಮೇಲೆ ಮಲಗಿದ ಕೇಶವಭೂಪ.

ಈಗೀಗ ಕೇಶವಭೂಪನು ಮೂಸೆಗೆ ಬಹಳ ಆರೈಕೆಮಾಡುತ್ತಿದ್ದ. ಆದಿನ ಗೆಳೆಯನಲ್ಲಿ ವಿಶೇಷವಾಗಿ ಬೆಣ್ಣೆಯನ್ನು ಕೇಳಿ ಮೂಸೆಗೆ ತೀಡಿಕೊಂ ಡಿದ್ದ. ರಾತ್ರಿಯಲ್ಲಿ ಯಾವುದೋ ಪಿಚ್ಚಿಲಿಗಳು ಒಂದು ಬದಿಯ ಮೂಸೆ

ಯನ್ನು ಕರಕರನೆ ಕಡಿದುಹಾಕಿದುವು. ಹೊಟ್ಟೆ ತುಂಬ ಔತಣದ ಊಟ ಮಾಡಿದ್ದರಿಂದ ಗಾಢನಿದ್ರೆ ಬೇರೆ. ಜೋರಾಗಿ ನೋವಾದಾಗಲೇ ಅವನಿಗೆ ಎಚ್ಚರಿಕೆಯಾದುದು. ಎದ್ದು ದೀಪದ ಬೆಳಕಿನಲ್ಲಿ ಕನ್ನಡಿ ನೋಡುತ್ತಾನೆ, ಏನು ನೋಡುವುದು? ಬಲಭಾಗದ್ದು ಹರಕು ಮೀಸೆಯಾಗಿತ್ತು ಅಲ್ಲಲ್ಲಿ ಉರಿಯುತ್ತಿತ್ತು. "ಅಯ್ಯೊ! ನನ್ನ ಮೀಸೆ! ಇನ್ನು ಈ ಹರಕು ಮೀಸೆಯು ಕೊಳಕು ಮುಖವನ್ನು ಹೇಗೆ ಜನರಿಗೆ ತೋರಿಸಲಿ? ಹೆಂಡತಿಯು ಇದಿರಿಗೆ ಹೇಗೆ ಹೋಗಲಿ?" ಎಂದು ತಲೆಕೆರೆದು ಯೋಚನೆ ಮಾಡಿದನು. ಪೂರಾ ಮೀಸೆ ಬೋಳಿಸದೆ ಬೇರೆ ಗತಿಯಿಲ್ಲ. ಮುಖಕ್ಷೌರದ ಬಾಳು ಅವನ ಜೇಬಿನಲ್ಲಿ ಸಿದ್ಧವಾಗೇ ಇತ್ತು.

ಕೇಶವಭೂಪನು ಕನ್ನಡಿ ನೋಡಿಕೊಂಡು, ತನ್ನ ಬಾಳಿನಿಂದ ಆ ಪ್ರಚಂಡವಾದ ನಿಂಬೆಹಣ್ಣು ಹೊರುವ ಮಹಾಮೀಸೆಯನ್ನು ನುಣ್ಣಗೆ ಬೋಳಿಸಿಕೊಂಡನು. ಆಗ ಅವನಿಗೇ ತಾನು ಕೇಶವಭೂಪನೋ ಎಂದು ಸಂದೇಹವಾಯಿತು. ತುಟಿಯು ಬುಡವು ಬೆಣ್ಣೆಯ ಹಾಗೆ ನುಣ್ಣಗಾಗಿತ್ತು. ಗುಡ್ಡದಂತಹ ಭಾರವು ಜಾರಿ ಕೆಳಗೆ ಬಿದ್ದಿತ್ತು. ಆ ಮೀಸೆಯ ರಾಶಿಯಿಂದ ಒಂದು ಬಗೆಯ ಹೇನುಗಳು ನೆಲದಲ್ಲೆಲ್ಲಾ ಹರಿದಾಡುತಿದ್ದುವು. "ಅಬ್ಬ, ಈ ಹೊರೆ ಮೀಸೆ ಹೋದದ್ದೇ ಲೇಸಾಯಿತು. ಈ ಹೇನುಗಳು ಕಚ್ಚುವುದನ್ನೆಲ್ಲಾ ಮೀಸೆ ಕಚ್ಚುವುದೆಂದೇ ತಿಳಿದಿದ್ದೆ. ಹಾಳು ಮೀಸೆ!" ಎಂದು ಸಮಾಧಾನ ತಾಳಿದನು.

ಆದರೆ ಬೆಳಗಾದ ಮೇಲೆ ಆ ಗ್ರಾಮದಲ್ಲಿ ತನ್ನ ಆ ಬೋಳುಮೀಸೆಯ ಹೊಸಮುಖವನ್ನು ತೋರಿಸಲು ಅವನಿಗೆ ನಾಚಿಗೆಯಾಯಿತು. ಅದಕ್ಕಾಗಿ ಮಧ್ಯರಾತ್ರಿಯಲ್ಲಿಯೇ ಆ ಗ್ರಾಮದಿಂದ ಹೊರಟು ಬಹುವೇಗವಾಗಿ ಕುದುರೆಯನ್ನು ಓಡಿಸಿಕೊಂಡು, ಬೆಳಗಾಗುವಷ್ಟರಲ್ಲಿ ಅರಮನೆಯನ್ನು ಮುಟ್ಟಿದನು.

ಅವನು ಒಳಗೆ ಹೋಗಲು ಹವಣಿಸುವಾಗ "ಯಾರೋ ಅದು? ನಿಲ್ಲು" ಎಂದು ಗದರಿಸಿ, ಕಾವಲುಗಾರನು ಅವನನ್ನು ತಡೆದನು.

ಕೇಶವಭೂಪನು "ನಾನು—ನಾನಲ್ಲವೇ? ಹಿঃ ಹಿঃ ಹಿঃ!" ಎಂದು ಹಲ್ಲುಬಿಟ್ಟನು.

ಸೇವಕರು ಪಿಳಿಪಿಳಿ ನೋಡಿದರು. ತಮ್ಮ 'ಭೂಪ'ರೇ ಹೌದೆಂದು ಕೊಂಡು ತಲೆವಾಗಿ ಸುಮ್ಮನಾದರು. ಭೂಪ ಒಳಗೆ ಹೋದ. ಲೀಲಾ

ಕುಮಾರಿ ಆಗ ತಾನೇ ಹಾಸಿಗೆಯಿಂದ ಎದ್ದಿದ್ದಳು. "ಲೀಲಾ, ನಿನ್ನನ್ನು ಬಿಟ್ಟು ಇರಲಿಕ್ಕೆ ಮನಸ್ಸು ಬಾರದೆ ಬೇಗನೇ—" ಎಂದು ಹೇಳುವಷ್ಟರಲ್ಲಿ ಲೀಲಾ ಕುಮಾರಿ ಅವನ ಮುಖ ನೋಡಿ "ಅಯ್ಯೋ!" ಎಂದು ಚೀರಿದಳು. "ಯಾರಿವನು? ಕಳ್ಳ! ಯಾರಲ್ಲಿ? ಇವನನ್ನು ಏಕೆ ಒಳಗೆಬಿಟ್ಟಿರಿ?'' ಎಂದು ಕೂಗಿದಳು.

ಕೇಶವಭೂಪನು ಹಲ್ಲು ತೋರಿಸುತ್ತಾ, "ಚೆನ್ನಾಗಿ ನೋಡು ಲೀಲಾ, ನಾನು ಕೇಶವಭೂಪ'' ಎನ್ನುವಾಗ ಅವಳು ಅವನ ಮಾತಿಗೆ ಕಿವಿಕೊಡದೆಯೇ ಆಜ್ಞೆಮಾಡಿದಳು. ''ಹಿಡಿಯಿರಿ ಇವನನ್ನು!''

ಅವಳ ಕೂಗಿಗೆ ಓಡಿ ಬಂದ ನಾಲ್ಕಾರು ಮಂದಿ ರಾಜಭಟರು ಅವನ ರಟ್ಟೆಗಳನ್ನು ಗಟ್ಟಿಯಾಗಿ ಹಿಡಿದುಕೊಂಡರು.

''ಈ ಪುಂಡನ ಬೆನ್ನಿಗೆ ನಾಲ್ಕಾರು ಕೊರಡೇ ಏಟು ಬಿಟ್ಟು ಬಂದೀಖಾನೆಯಲ್ಲಿ ಹಾಕಿರಿ. ನನ್ನ ತಂದೆಯನ್ನು ಕರೆದುಕೊಂಡು ಬನ್ನಿ'' ಎಂದು ಆಜ್ಞಾಪಿಸಿದಳು ರಾಜಕುಮಾರಿ.

ಭೂಪನ ಮಾತುರೀತಿಗಳೆಲ್ಲಾ ಕಾಡುಗೋಳಾಯಿತು. ರಾಜಕುಮಾರಿ ಅಳುತ್ತ ಮಂಚದಲ್ಲಿ ಬಿದ್ದುಬಿಟ್ಟಿದ್ದಳು.

ರಾಜಭಟರು ಕೇಶವಭೂಪನ ಅಂಗಿಯನ್ನೆತ್ತಿ ''ಛಟಾರ್, ಫಟಾರ್'' ಎಂದು ಕೊರಡೇ ಏಟು ಬಿಗಿದರು. ಬಳಿಕ ಅವನನ್ನು ಎಳೆದುಕೊಂಡು ಹೋಗಿ ಕೈಕಾಲು ಕಟ್ಟಿ ಒಂದು ಕೋಣೆಯೊಳಗೆ ಹಾಕಿದರು.

ಈ ಸುದ್ದಿ ಕೇಳಿ ಜಗದೀಶರಾಜನು ಕುಮಾರಿಯ ಮನೆಗೆ ಧಾವಿಸಿ ಬಂದನು. ತಂದೆಯನ್ನು ನೋಡಿ ಲೀಲಾಕುಮಾರಿ "ಅಪ್ಪಾ, ಯಾರೋ ಮೋಸಗಾರ ನನ್ನ ಪತಿಯಂತೇ ಸೋಗು ಕಟ್ಟಿಕೊಂಡು ಬಂದ. ಚೆನ್ನಾಗಿ ಛಡಿಹೊಡೆಸಿ ಕೋಣೆಯಲ್ಲಿ ಹಾಕಿಸಿದ್ದೇನೆ" ಎಂದಳು.

ರಾಜನು ಗಡಿಬಿಡಿಯಿಂದ ಬಂದೀಖಾನೆಗೆ ಹೋಗಿ ಅಲ್ಲಿ ನರಳುತ್ತಿರುವ ಬೋಳುಮೀಸೆಯ ಕೇಶವಭೂಪನನ್ನು ಕಂಡು ಏನು ಕಥೆ ಎಂದು ವಿಚಾರಿಸಿದನು. "ನಿಮಗೂ ನನ್ನ ಗುರುತು ತಿಳಿಯಲಿಲ್ಲವೆ? ನನ್ನ ಮೀಸೆಯಿಂದಲೇ ಇಷ್ಟು ಪೇಚಾಟ ಬಂತು. ನಿಮ್ಮ ಮಗಳನ್ನು ಮದುವೆಮಾಡಿಕೊಳ್ಳುವುದಿಲ್ಲವೆಂದು ನಾನು ಎಷ್ಟು ಹೇಳಿದರೂ ನೀವು ಕೇಳಲಿಲ್ಲ. ಈಗ ನನ್ನ ಮಾನ, ನನ್ನ ಮನೆತನದ ಮಾನ ಎಲ್ಲಾ ಮಣ್ಣುಗೂಡಿಹೋಯಿತು.

ಹೋಗಲಿ. ಇನ್ನು ನೀವಾಯಿತು, ನಿಮ್ಮ ಮಗಳಾಯಿತು. ಇಷ್ಟರಲ್ಲಿಯೇ ನನ್ನನ್ನು ಬಿಟ್ಟರಾದರೆ ಎಲ್ಲಿಗಾದರೂ ಹೋಗಿಬಿಡುತ್ತೇನೆ" ಎಂದು ಬಡ ಬಡ ಅಂದನು.

"ಇದಕ್ಕೆಲ್ಲ ಕಾರಣವಾದ ನಿನ್ನ ಮೀಸೆ ಎಲ್ಲಿಗೆ ಹೋಯಿತು?" ಎಂದು ಕೇಳಿದ ರಾಜ.

"ನಿನ್ನೆ ಮಧ್ಯಾಹ್ನ ಕ್ಷೌರಮಾಡೋಣವೆಂದು ಹಳ್ಳಿಯ ಕ್ಷೌರಿಕನನ್ನು ಕರೆಸಿದೆ. ಆತ ಬರಿ ಮೂಢ. ಪರಕ್ಕನೆ ಮೀಸೆಯ ಅರ್ಧಭಾಗವನ್ನು ಕತ್ತರಿಸಿಬಿಟ್ಟ. ಮತ್ತೇನು ಮಾಡುವುದು? ಎಲ್ಲವನ್ನೂ ಬೋಳಿಸಿ ಬಿಡೋ ಅಂದೆ. ಹೀಗಾಯಿತು ಗತಿ" ಎಂದು ಸುಳ್ಳು ಬೊಂಕಿದ ಭೂಪ.

"ಸರಿ. ಆದುದನ್ನು ಮರೆತುಬಿಡು. ಬಾ, ಕುಮಾರಿಯ ಬಳಿಗೆ ಹೋಗುವ. ನಾನು ಅವಳನ್ನು ಸಮಾಧಾನಮಾಡುತ್ತೇನೆ" ಎಂದ ರಾಜ.

"ಇಲ್ಲ. ನಾನು ಅವಳ ಮುಖ ನೋಡಲಾರೆ. ಅವಳೇ ಬಂದು ನನ್ನಲ್ಲಿ ಕ್ಷಮೆ ಕೇಳಿಕೊಳ್ಳಬೇಕು" ಎಂದು ಕೇಶವಭೂಪ ಹೇಳಿದ.

ರಾಜ ಲೀಲಾಕುಮಾರಿಯ ಬಳಿಗೆ ಹೋಗಿ ಅವನು ಮೀಸೆಬೋಳಿಸಿದ ಕಾರಣವನ್ನು ಹೇಳಿ "ಅವನೇ ಕೇಶವಭೂಪ. ಸಂಶಯವಿಲ್ಲ. ಹೋಗಿ ಉಪಚರಿಸಿ, ಕ್ಷಮೆಕೇಳಿ ಕರಕೊಂಡು ಬಾಮ್ಮ" ಎಂದು ಹೇಳಿದ.

ಅದಕ್ಕೆ ಲೀಲಾಕುಮಾರಿ—"ಇಲ್ಲಪ್ಪಾ. ಇವನು ಮೋಸಗಾರನೇ ಸರಿ. ಕ್ಷೌರಿಕನ ಕತೆ ಸುಳ್ಳು. ನನ್ನ ಪತಿ ತಾನೇ ಮುಖಕ್ಷೌರಮಾಡಿ ಕೊಳ್ಳುತ್ತಾರೆ. ಒಬ್ಬರ ಹಾಗೇ ಸ್ವರಬದಲಾಯಿಸಿ ಮಾತಾಡುವ ಕಳ್ಳರು ಹಲವರಿದ್ದಾರೆ. ಈತ ನನ್ನ ಪತಿಗೆ ಏನೋ ಕೇಡುಮಾಡಿ ದುರಾಲೋಚನೆ ಯಿಂದಲೇ ಹೀಗೆ ಬಂದಿದ್ದಾನೆ. ಇಲ್ಲದಿದ್ದರೆ ರಾತಾರಾತ್ರಿ ಪ್ರಯಾಣಮಾಡಿ ಬೆಳ್ಳಂಬೆಳಗ್ಗೇ ಇಲ್ಲಿಗೆ ಬರುವ ಕಾರಣವೇನು? ಮೇಲಾಗಿ ನನ್ನ ಪತಿ ಮೂರು ದಿನಗಳಲ್ಲಿ ಬರುತ್ತೇನೆ ಎಂದಿದ್ದಾರೆ. ಅಪ್ಪಾ, ಆ ಗ್ರಾಮಕ್ಕೆ ದೂತರನ್ನು ಕಳುಹಿಸಿರಿ. ಈ ಪುಂಡನು ಹೇಳುವ ಆ ಕ್ಷೌರಿಕನನ್ನು ಕೂಡಾ ಹಿಡಿದು ಕೊಂಡು ಬರುವಂತೆ ಹೇಳಿರಿ. ಅವನು ಸಾಕ್ಷಿ ಹೇಳಿದರೆ ನೋಡೋಣ. ಸ್ವಾಮಿ ದೇವರೆ, ನನ್ನ ಗಂಡ ಸುಖವಾಗಿ ಮನೆಗೆ ಬರುವ ಹಾಗಾಗಲಿ. ನಾಲ್ಕು ಕಡೆಗೂ ದೂತರನ್ನು ಅಟ್ಟಿ ಹುಡುಕಿಸಿರಿ ಅಪ್ಪಾ" ಎಂದಳು.

ಉಪಾಯವಿಲ್ಲದೆ ಜಗದೀಶರಾಜನು ಕೇಶವಭೂಪನ ಬಳಿಗೆ ಬಂದು "ಆ ಕ್ಷೌರಿಕ ಬಂದು ಸಾಕ್ಷಿ ಹೇಳಿದರೆ ಕುಮಾರಿಗೆ ನಂಬುಗೆಯಾಗುತ್ತದಂತೆ. ಅವನ ಹೆಸರು, ಅವನು ಇರುವ ಸ್ಥಳ ಎಲ್ಲಾ ಹೇಳು" ಎಂದನು.

ಕೇಶವಭೂಪನು ಹಿಂದೆಮುಂದೆ ನೋಡಿದ. ಒಂದು ಸುಳ್ಳಿಗೆ ಇನ್ನೊಂದು ಸುಳ್ಳು ಪೋಣಿಸಲು ತೋರಲಿಲ್ಲ. "ಅವನಾರೋ ಹೊಸಬ. ಎಲ್ಲಿರುವನೋ ಗೊತ್ತಿಲ್ಲ" ಎಂದು ಹಾರಿಸಿ ಉತ್ತರಕೊಟ್ಟನು.

"ಒಳ್ಳೆಯದು. ನಿನ್ನ ಗ್ರಾಮಕ್ಕೆ ದೂತರನ್ನು ಕಳುಹಿಸುವೆನು. ಅವರು ಬಂದು ಏನು ಹೇಳುವರೋ ನೋಡೋಣ" ಎಂದ ರಾಜ.

"ನೀವು ಏನು ಬೇಕಾದರೂ ಮಾಡಿ. ನನ್ನನ್ನು ಮಾತ್ರ ನನ್ನಷ್ಟಕ್ಕೆ ಬಿಟ್ಟುಬಿಡಿ. ನಿಮಗೆ ನನ್ನ ಮೇಲೆ ಏನೂ ಸಂಶಯವಿಲ್ಲವಷ್ಟೆ?" ಎಂದು ಕೇಶವಭೂಪ ಕೇಳಿದ.

"ನನಗೇನೂ ಸಂಶಯವಿಲ್ಲ. ಆದರೆ ನಿನ್ನನ್ನು ಬಿಟ್ಟುಬಿಟ್ಟರೆ ನೀನು ಅವಮಾನವಾಯಿತು ಅಂದುಕೊಂಡು ಎಲ್ಲಿಗಾದರೂ ಹೋಗಿಬಿಡುವಿಯಾ? ಹಾಗೆ ಹೋಗಲಾರೆನೆಂದು ಮಾತುಕೊಡು" ಎಂದು ರಾಜನೆಂದ.

"ಹಾಗೆ ಕಳ್ಳನಂತೆ ನಾನೇಕೆ ಓಡಿಹೋಗಲಿ? ಅವಳಿಗೆ ಸತ್ಯದ ಅರಿಕೆಯಾಗದೆ ನಾನು ಓಡಿಹೋಗುವುದು ಸರಿಯೂ ಅಲ್ಲ" ಎಂದ ಭೂಪ.

ಜಗದೀಶರಾಜನು ಕೇಶವಭೂಪನನ್ನು ಸ್ವತಂತ್ರವಾಗಿರಲು ಬಿಟ್ಟುಬಿಟ್ಟ. ಕುಮಾರಿಯೊಡನೆ ಮಾತ್ರ ಅವನು ಸೆರೆಯಲ್ಲಿಯೇ ಇರುವನೆಂದು ಸುಳ್ಳುಹೇಳಿದ.

o o o o o

ಕೇಶವಭೂಪನ ಗ್ರಾಮಕ್ಕೆ ಹೋಗಿಬಂದ ದೂತರು ಅರಸನನ್ನು ಕುರಿತು ಹೀಗೆಂದು ಅರಿಕೆಮಾಡಿಕೊಂಡರು:

"ಕೇಶವಭೂಪರು ಗ್ರಾಮಕ್ಕೆ ಬಂದಾಗ ಮುಖತುಂಬಾ ಮೀಸೆ ಇತ್ತಂತೆ. ರಾತ್ರಿ ಅವರು ಅವರ ಗೆಳೆಯರೊಬ್ಬರ ಮನೆಯಲ್ಲಿ ಉಂಡು ತಮ್ಮ ಮನೆಗೆ ಹೋಗಿದ್ದಾರಂತೆ. ಅದು ವರೆಗೂ ಅವರ ಮುಖದಲ್ಲಿ ಮೀಸೆ ಇತ್ತಂತೆ. ಅಷ್ಟರ ವರೆಗೆ ಅವರನ್ನು ಕಂಡ ಅನೇಕರು ಈ ಸಂಗತಿ ಹೇಳಿದ್ದಾರೆ. ಬೆಳಗಾಗುವಷ್ಟರಲ್ಲಿ ಅವರು ಕಾಣೆಯಾಗಿದ್ದಾರೆ. ಅವರ ಮನೆಗೆ ಬೀಗ ಹಾಕಿದೆ."

ಇದನ್ನು ಕೇಳಿ ಅರಸನು, "ಓಹೊ, ಬೆಳಗಾಗುವಾಗ ಇಲ್ಲಿಗೆ ಬಂದಿದ್ದಾನಲ್ಲಾ. ಹಾಗಾದರೆ ರಾತ್ರಿಯಲ್ಲಿ ಆ ಕ್ಷೌರಿಕ ಮೀಸೆ ಬೋಳಿಸಿದ್ದೋ? ಸುಳ್ಳೇ ಸರಿ. ಏನೋ ಮೋಸವಿದೆ. ಹಾಗಾದರೆ ಕಠಿನವಾಗಿ ಕೇಳಿನೋಡುವ" ಎಂದುಕೊಂಡು ಅವನನ್ನು ಕರೆದುಕೊಂಡು ಬರುವಂತೆ ಸೇವಕರಿಗೆ ಆಜ್ಞೆ ಮಾಡಿದನು.

ಸೇವಕರು ಅಲ್ಲಲ್ಲಿ ಹುಡುಕಿಬಂದು "ಅವನು ಕಾಣೆಯಾಗಿದ್ದಾನೆ ಸ್ವಾಮಿ" ಎಂದರು.

ಕೂಡಲೇ ರಾಜನಿಗೆ ಬಲವಾದ ಸಂಶಯುಬಂತು. ನನ್ನ ಕುಮಾರಿ ಹೇಳುವ ಹಾಗೆ ಇವನೊಬ್ಬ ಠಕ್ಕನೋ ಏನೋ? ನನ್ನ ರಾಜ ಮೀಸೆಯ ಅಳಿಯ ಭೂಪನಿಗೆ ಈ ಠಕ್ಕನಿಂದ ಏನಾದರೂ ಘಾತವಾಯಿತೋ? ಹಾಂ! ಎಂತಹ ಮೋಸವಾಯಿತು. ನನಗಿಂತಲೂ ನನ್ನ ಕುಮಾರಿಯೇ ಸೂಕ್ಷ್ಮಮತಿ!" ಎಂದುಕೊಂಡನು.

"ಸೇವಕರೆ, ತ್ವರೆಮಾಡಿರಿ. ನೆರೆಯಿಂದ ಪಾರಾಗಿಹೋದ ಆ ಠಕ್ಕನನ್ನು ಹುಡುಕಿ ಹಿಡಿದುತಂದವರಿಗೆ ಬಹುಮಾನಕೊಡುತ್ತೇನೆ. ಹಾಗೆಯೇ ನನ್ನ ಅಳಿಯ ಮೀಸೆಯುಳ್ಳ ಕೇಶವಭೂಪನನ್ನು ಹುಡುಕಿ ಕರೆದುಕೊಂಡು, ಅಥವಾ ಪತ್ತೆ ಹಚ್ಚಿಕೊಂಡು ಬಂದವರಿಗೆ ಪ್ರತ್ಯೇಕವಾದ ವಿಶೇಷ ಬಹುಮಾನವುಂಟು" ಎಂದು ಸೇವಕರನ್ನು ನಾಲ್ಕು ದಿಕ್ಕುಗಳಿಗೂ ಕಳುಹಿಸಿದನು ಅರಸ.

ಇಷ್ಟೆಲ್ಲಾ ಪೇಚಾಟಮಾಡಿಸಿದ ಕೇಶವಭೂಪನು ಏನು ಮಾಡಿದನು ಗೊತ್ತೆ? ಆತನು ಸೀದಾ ಭೈರವೇಂದ್ರಪುರಕ್ಕೆ ಹೋದನು.

ಭೈರವಮೇಳದ ಒಡೆಯರಾದ ನಟಪಟು ರಾಹಪ್ಪನವರನ್ನು ಕಂಡನು. ಭೈರವಮೇಳದ ಆಟವು ಆತನ ಮದುವೆಯ ಸಮಯದಲ್ಲಿ ಬಲುಜೋರಿನಿಂದ ಸಾಗಿತ್ತು. ಆಗ ಕೇಶವಭೂಪನಿಗೆ ರಾಹಪ್ಪನ ಪರಿಚಯವಾಗಿತ್ತು.

"ನನ್ನ ಗುರುತು ಹತ್ತಿತೆ ರಾಹಪ್ಪನವರೆ?" ಎಂದು ಕೇಶವಭೂಪ ಕೇಳಿದ. ರಾಹಪ್ಪ ಅವನನ್ನು ದಿಟ್ಟಿಸಿ ನೋಡಿ "ಓಹೊ, ಕೇಶವಭೂಪರು. ನಿಮ್ಮ ಮುಖಾಲಂಕಾರದ ಮೀಸೆ ಎಲ್ಲಿ?" ಎಂದು ಕೇಳಿದರು ರಾಹಪ್ಪ.

"ಅದನ್ನು ಹೇಳಲಿಕ್ಕೇ ನಾನು ಬಂದೆ. ನಾನಿನ್ನು ಬೇಗದಲ್ಲಿಯೇ ತಂದೆಯಾಗಲಿದ್ದೇನೆ. ನಂತರ ಮಗುವನ್ನು ಮುದ್ದಿಸಲು ತೊಂದರೆಯಾ

ಗುವುದೆಂದು ಮೀಸೆಯನ್ನು ಬೋಳಿಸಿಬಿಟ್ಟೆ. ಮೀಸೆಯಿದ್ದಾಗಿನ ನನ್ನದೊಂದು ಚಿತ್ರ ಬರೆಯಿಸಲು ಈಗ ಮಹಾರಾಜರು ಇಚ್ಛಿಸುತ್ತಾರೆ. ಚಿತ್ರಕಾರನೂ ಬಂದಿದ್ದಾನೆ. ಅದಕ್ಕಾಗಿ ನಿಮ್ಮ ವೇಷದ ಮೀಸೆ ಬೇಕಾಗಿದೆ. ಕೆಲಸವಾಗುತ್ತಲೇ ವಾಪಾಸು ತಂದುಕೊಡುತ್ತೇನೆ'' ಎಂದ ಕೇಶವಭೂಪ.

"ಹಾಗೆಯೇ ಆಗಲಿ" ಎಂದು ರಾಹೆಪ್ಪನವರು ಅವನನ್ನು ಒಳಗೆ ಕರೆದೊಯ್ದು ನಾನಾ ಬಗೆಯ ಮೀಸೆಗಳನ್ನು ತೋರಿಸಿದರು. ಕೇಶವಭೂಪನಿಗೆ ಮೊದಲು ಯಾವ ಮೀಸೆಯಿತ್ತೋ ಅದೇ ತರದ ಮಹಾಮೀಸೆಯೂ ಅಲ್ಲಿತ್ತು. ಅದನ್ನು ಇಟ್ಟುಕೊಂಡು ಮೊದಲಿನಂತೆಯೇ ಮೀಸೆಯ ಭೂಪನಾಗಿ, ರಾಹೆಪ್ಪನಿಗೆ ಕೃತಜ್ಞತೆ ಹೇಳಿ ಅಲ್ಲಿಂದ ಹೊರಟ.

○ ○ ○ ○ ○

ದಾರಿಯಲ್ಲಿ ಕೆಲವು ರಾಜದೂತರು ಓಡೋಡಿ ಅವನ ಬಳಿಗೆ ಬಂದು, ವಿನಯದಿಂದ ಬಾಗಿ–"ಸ್ವಾಮಿ, ತಮಗಾಗಿ ನಾವೆಲ್ಲಾ ಹುಡುಕಾಡುತ್ತಿದ್ದೇವೆ. ರಾಜರೂ, ಕುಮಾರಿಯೂ ವ್ಯಥೆಪಡುತ್ತಿದ್ದಾರೆ. ತಾವು ಬೇಗನೇ ಅರಮನೆಗೆ ಬರಬೇಕು'' ಎಂದು ಪ್ರಾರ್ಥಿಸಿದರು.

"ಅಲ್ಲಿಗೇ ಹೊರಟಿದ್ದೇನೆ, ನಡೆಯಿರಿ'' ಎನ್ನುತ್ತಾ ಕೇಶವಭೂಪನು ರಾಜಠೀವಿಯಿಂದ ನಡೆದನು. ಕೆಲವರು ಸುದ್ದಿ ತಿಳಿಸಲು ಮುಂದಾಗಿ ಅರಮನೆಗೆ ಓಡಿದರು.

ನಿಜವಾದ ಕೇಶವಭೂಪನು ಬರುತ್ತಿದ್ದಾನೆಂದು ಕೇಳಿ ರಾಜನೂ ಮಂತ್ರಿಯೂ ಓಡೋಡಿ ಬಂದು ಅವನನ್ನು ಇದಿರುಗೊಂಡರು. ಅರಸನು ಅಳಿಯನ ಕೈಯನ್ನು ಹಿಡಿದು—"ಆಹಾ! ಸುಖವಾಗಿರುವಿಯಾ? ನಾನೆಷ್ಟು ಮೋಸಹೋದೆ! ಯಾವನೋ ಒಬ್ಬ ಠಕ್ಕನನ್ನು ನೀನೆಂದೇ ನಂಬಿದ್ದೆನಲ್ಲ! ನನ್ನ ಮಗಳ ಮಾತೇ ಸರಿಯಾಯಿತು. ಅವಳ ಪಾತಿವ್ರತ್ಯವೇ ಗೆದ್ದಿತು......" ಎಂದು ಹೇಳುತ್ತಾ ಕರೆದೊಯ್ದನು.

ಕೇಶವಭೂಪನೂ ಬಿಡದೆ "ಏನು ಹೇಳಲಿ ಮಾವಯ್ಯಾ; ದೇವರ ದಯದಿಂದಲೇ ಪಾರಾಗಿ ಬಂದೆ. ಅದೆಲ್ಲಾ ಬಹು ದೊಡ್ಡ ಕತೆ" ಎಂದ.

ಗಂಡನನ್ನುನೋಡಿದ ಲೀಲಾಕುಮಾರಿಗೆ ಹೋದ ಜೀವ ಬಂದಹಾಗಾಯಿತು. "ಅಪ್ಪಾ, ಇವರು ಕ್ಷೇಮವಾಗಿ ಬಂದುದಕ್ಕೆ ಊರಗುಡಿಗಳಲ್ಲೆಲ್ಲಾ ಅರ್ಚನೆಮಾಡಿಸಿರಿ" ಎಂದಳು.

"ನಿನಗೆ ಒದಗಿದ ಗಂಡಾಂತರವೇನಪ್ಪ?" ಎಂದು ಅರಸ ಕೇಳಿದ.

"ಏನು ಹೇಳಲಿ ಮಾವಾ, ಒಬ್ಬ ದುಷ್ಟನು ನನ್ನ ಪ್ರಾಣ ಹೀರಲಿಕ್ಕೆ ನೋಡಿದ. ಅದಿರಲಿ, ಆ ದುಷ್ಟನು ಇಲ್ಲಿಗೆ ಬಂದು ಏನುಮಾಡಿದ?" ಎಂದು ಮರುಪ್ರಶ್ನೆ ಹಾಕಿದ ಕೇಶವಭೂಪ.

"ಅದೇನು ಹೇಳುವುದು! ನೀನೇ ತಾನು ಎಂದ. ಸ್ವರವೂ ಹಾವ ಭಾವಗಳೂ ನಿನ್ನ ಹಾಗೆಯೇ ಇದ್ದುದನ್ನು ನೋಡಿ ನಾನೇನೋ ನಂಬಿಬಿಟ್ಟೆ. ನನ್ನ ಮಗಳು ಮಾತ್ರ ನಂಬಲೇ ಇಲ್ಲ. ಅವನಿಗೆ ಚೆನ್ನಾಗಿ ಕೊರಡೇ ಏಟು ಗಳನ್ನು ಕೂಡಾ ಕೊಡಿಸಿದಳು" ಎಂದ ಅರಸ.

"ಭೇಷ್! ಹಾಗೆಯೇ ಆಗಬೇಕು ಅವನಿಗೆ. ಈಗ ಸೆರೆಯಲ್ಲಿದ್ದಾನೆ ಯೆ?" ಕೇಳಿದ ಕೇಶವಭೂಪ.

"ಇಲ್ಲವಲ್ಲಾ. ನಾನೇ ಬುದ್ಧಿ ಕೆಟ್ಟು ಅವನನ್ನು ಬಿಟ್ಟುಬಿಟ್ಟೆ. ಪರಾರಿಯಾಗಿ ಬಿಟ್ಟ ಕಳ್ಳ" ಎಂದು ಅರಸ ಹಳಹಳಿಸಿದ. ಹಾಗೂ ಸೇವಕರನ್ನು ಕರೆದು—"ಆ ಠಕ್ಕನನ್ನು ಹಿಡಿದು ತಂದವರಿಗೆ ಎರಡು ಸಾವಿರ ರೂಪಾಯಿ ಬಹುಮಾನ ಕೊಡುತ್ತೇನೆ" ಎಂದು ಹೇಳಿದ.

"ಇದೀಗ ಸರಿ. ಹೀಗಾದರೇನೇ ಸೇವಕರು ಶ್ರದ್ಧೆಯಿಂದ ಹುಡುಕುವರು. ಏನಾಯಿತು ಗೊತ್ತೇ? ಮೊನ್ನೆ ಮಧ್ಯರಾತ್ರಿಯಲ್ಲಿ, ಆ ಕಳ್ಳನಿಗೂ ನನಗೂ ಗಂಟುಬಿತ್ತು. ಆತ ನನ್ನ ಹಳ್ಳಿಯ ಮನೆಯೊಳಗೆ ಹೇಗೋ ಹೊಕ್ಕು ನನ್ನನ್ನು ಕೊಲ್ಲಲಿಕ್ಕೆ ಬಂದ. ನನಗೂ ಅವನಿಗೂ ಗುದ್ದಾಟ ವಾಯಿತು. ಅವನ ಏಟುಗಳಿಂದ ನನ್ನ ಬೆನ್ನು ಹೇಗಾಗಿದೆಯೋ ನೋಡಿರಿ." ಎಂದು ಕೇಶವಭೂಪನು ಬಾಗಿ ಬೆನ್ನಿನ ಅಂಗಿಯನ್ನೆತ್ತಿ ತೋರಿಸಿದನು.

ಅಲ್ಲಿ ಮೂಡಿರುವ ಅನೇಕ ಬಾಸುಂಡೆಗಳನ್ನು ನೋಡಿ ಅರಸನು "ಅಯ್ಯೋ!" ಎಂದನು. ಲೀಲಾಕುಮಾರಿಯು "ಅಯ್ಯೋ!" ಎಂದಳು. ಎಲ್ಲರೂ "ಅಯ್ಯೋ!" ಎಂದರು.

"ನೋಡಿದಿರಾ!" ಎನ್ನುತ್ತ ನೆಟ್ಟಗೆ ನಿಂತ ಕೇಶವಭೂಪ.

ಅವನ ಮುಖ ನೋಡಿ ರಾಜನೂ ಕುಮಾರಿಯೂ ಬೆಚ್ಚಿಬಿದ್ದರು. ಮುಖದಲ್ಲಿ ಮೀಸೆಯಿರಲಿಲ್ಲ; ಅವನ ಕೈಯಲ್ಲಿತ್ತು ಆ ಮಹಾಮೀಸೆ!

"ಇದೇನಿದು?!" ಬಾಯಿಬಿಟ್ಟ ರಾಜ.

ಕೇಶವಭೂಪ ನಗುತ್ತ "ನನ್ನ ಕರ್ಮ" ಎಂದ.

"ಆ ಕಳ್ಳ?"—ಅರಸನ ಬಾಯಿ ತಪ್ಪಿಬಿದ್ದ ಪ್ರಶ್ನೆ.

"ಎಲ್ಲಾ ನಾನೇ. ಮುಖ್ಯ ಈ ಮೀಸೆಯನ್ನು ತೆಗೆಯಬೇಕೆಂದೇ ನಾನು ಗ್ರಾಮಕ್ಕೆ ಹೋದೆ. ಏಕೆಂದರೆ ಈ ಮೀಸೆ ದೊಡ್ಡ ಹೊರೆಯ ಹಾಗೆ ಬಹಳ ಭಾರವಾಗಿತ್ತು. ಇನ್ನೂ ಎಷ್ಟೋ ತೊಂದರೆಗಳು. ಇದಕ್ಕೆ ನೀವಾರೂ ಒಪ್ಪಲಿಕ್ಕಿಲ್ಲವೆಂದು, ರಾತ್ರಿಯಲ್ಲಿ ನಾನೇ ಮೀಸೆಬೋಳಿಸಿಕೊಂಡು ಇಲ್ಲಿಗೆ ಬಂದೆ. ಅವಸರಪಟ್ಟು ಬಂದುದರಿಂದ ನಿಮ್ಮ ಮಗಳು ನನಗೆ ಈ ಬಾಸುಂಡೆಗಳನ್ನು ಪ್ರಸಾದಿಸಿದಳು. ನಿಮ್ಮನ್ನೆಲ್ಲಾ ನಂಬಿಸಲಿಕ್ಕೆ ಮತ್ತೆ ಹೀಗೆ ಬಂದೆ" ಎಂದು ಕೇಶವಭೂಪ ಪುನಃ ಮೀಸೆಯನ್ನು ಅಂಟಿಸಿಕೊಂಡನು.

"ಇದೊಳ್ಳೇ ಕತೆ" ಎಂದು ಅರಸ ನಕ್ಕ. ಭೂಪನೂ ನಕ್ಕ. ಮಂತ್ರಿ ಮೊದಲಾದವರು ನಗಬೇಕೋ ಅಳಬೇಕೋ ತಿಳಿಯದೆ ಕಷ್ಟಪಡುತ್ತಿದ್ದರು.

ಲೀಲಾಕುಮಾರಿ ನಾಚಿಕೆಯಿಂದ ತಲೆ ತಗ್ಗಿಸಿ ನಿಂತಿದ್ದಳು.

▪▪▪▪▪▪▪▪

Edited, Printed and Published by K. V. Shenoy
at The Prabhat Printers, Ltd., Mangalore-1.